CCE RF/PF/RR/PR/NSR/NSPR(A)/666/029

**A**

**ಮಾರ್ಚ್/ಏಪ್ರಿಲ್ 2024 ರ ಪರೀಕ್ಷೆ - 1**

**MARCH/APRIL 2024 EXAMINATION-1**

Question Paper Serial No.

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8 ]
Total No. of Printed Pages : 8 ]
ಒಟ್ಟು ಪ್ರಶ್ನೆಗಳ ಸಂಖ್ಯೆ : 25 ]
Total No. of Questions : 25 ]

**CCE RF/PF/RR/PR/NSR/NSPR**
**FULL SYLLABUS**

**ಸಂಕೇತ ಸಂಖ್ಯೆ : 29-K**
**Code No. : 29-K**

# ವಿಷಯ : ಕರ್ನಾಟಕ ಸಂಗೀತ — ಶಾಸ್ತ್ರ ವಿಭಾಗ

# Subject : CARNATIC MUSIC — THEORY

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**

**(Regular Fresh / Private Fresh / Regular Repeater / Private Repeater / NSR / NSPR)**

ದಿನಾಂಕ : 30. 03. 2024 ] [ Date : 30. 03. 2024
ಸಮಯ : ಮಧ್ಯಾಹ್ನ 2-00 ರಿಂದ ಸಂಜೆ 3-45 ರವರೆಗೆ ] [ Time : 2-00 P.M. to 3-45 P.M.
ಗರಿಷ್ಠ ಅಂಕಗಳು : 40 ] [ Max. Marks : 40

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

**Cut here/ಇಲ್ಲಿ ಕತ್ತರಿಸಿ** →

1. ಈ ಪ್ರಶ್ನೆಪತ್ರಿಕೆಯು ಒಟ್ಟು 25 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ **ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣವನ್ನು ಅನುಸರಿಸಿ), ಎಡಬದಿ ಪಾರ್ಶ್ವವನ್ನು ಕತ್ತರಿಸಬೇಡಿ.** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ಸೂಚಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
6. ನಿಮಗೆ ವಿತರಿಸಲಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ( Version ) ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ಒಂದೇ ಆಗಿರುವುದನ್ನು ಖಾತರಿಪಡಿಸಿಕೊಳ್ಳಿ.

CARNATIC MUSIC

**30. 03. 2024**

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

**Tear here**

ಇಲ್ಲಿಂದ ಕತ್ತರಿಸಿ

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** **8 × 1 = 8**

1. ಖಂಡ ಜಾತಿಯ ಅಕ್ಷರಕಾಲ

   (A) 3

   (B) 4

   (C) 5

   (D) 7

2. ಸಂಗೀತದ ಮೂಲ

   (A) ಋಗ್ವೇದ

   (B) ಯಜುರ್ವೇದ

   (C) ಸಾಮವೇದ

   (D) ಆಯುರ್ವೇದ

3. ಜನಕರಾಗವನ್ನು ಸಂಪೂರ್ಣರಾಗವೆಂದು ಕರೆಯಲು ಕಾರಣ, ಜನಕರಾಗದ ಆರೋಹಣ ಮತ್ತು ಅವರೋಹಣಗಳಲ್ಲಿ

(A) ಸಪ್ತಸ್ವರಗಳಿವೆ

(B) ಪ್ರಕೃತಿ ಸ್ವರಗಳಿವೆ

(C) ಅನ್ಯಸ್ವರಗಳಿವೆ

(D) ಮೂಲ ಸ್ವರಗಳಿವೆ

4. ಕನಕದಾಸರ ಅಂಕಿತನಾಮ

(A) ವಿಠಲ

(B) ಹರಿಕೇಶ

(C) ಗುರುಗುಹ

(D) ಆದಿಕೇಶವ

5. ಸಂಗೀತವು ಭೌತಶಾಸ್ತ್ರದೊಂದಿಗೆ ಸಂಬಂಧ ಹೊಂದಿದೆ ಎಂಬುದಕ್ಕೆ ಕಾರಣವಾದ ಅಂಶವೆಂದರೆ,

   (A) ಪ್ರಕೃತಿಯು ಸಂಗೀತದ ಮೂಲ

   (B) ಶಬ್ದವು ಸಂಗೀತದ ಮೂಲ

   (C) ಸ್ವರಗಳು ಸಂಗೀತದ ಮೂಲ

   (D) ತಾಳವು ಸಂಗೀತದ ಮೂಲ

6. ಚತುರಶ್ರಜಾತಿ ರೂಪಕ ತಾಳದಲ್ಲಿ ಒಂದು ಆವರ್ತಕ್ಕೆ 6 ಅಕ್ಷರಗಳಿವೆ. ಏಕೆಂದರೆ ಈ ತಾಳದ ಲಘುವಿನ ಅಕ್ಷರಗಳು

   (A) 1

   (B) 2

   (C) 3

   (D) 4

7. ಈ ಕೆಳಗಿನವುಗಳಲ್ಲಿ ಗಾಂಧಾರ ಪ್ರಭೇದ

   (A) ಪ್ರತಿ

   (B) ಕೈಶಿಕಿ

   (C) ಅಂತರ

   (D) ಚತುಶ್ರುತಿ

8. ಹಿಂದೂಸ್ಥಾನಿ ಸಂಗೀತ ಪದ್ಧತಿಯಲ್ಲಿ ಹಿಂದೋಳ ರಾಗದ ಹೆಸರು

(A) ಚಂದ್ರಕೌನ್ಸ್

(B) ಜೋಗ್‌ಕೌನ್ಸ್

(C) ಮಧುಕೌನ್ಸ್

(D) ಮಾಲ್‌ಕೌನ್ಸ್

**II. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ : 8 × 1 = 8**

9. ಆಧಾರ ಶ್ರುತಿ ಎಂದರೇನು ?

10. ಕರ್ನಾಟಕ ಸಂಗೀತವನ್ನು ದಕ್ಷಿಣಾದಿ ಸಂಗೀತವೆಂದು ಕರೆಯಲು ಕಾರಣವೇನು ?

11. 'ಚೆನ್ನಮಲ್ಲಿಕಾರ್ಜುನ' ಅಂಕಿತವು ಯಾರ ಅಂಕಿತವಾಗಿದೆ ?

12. ಸ್ವರಗಳ ಆರೋಹಣ ಮತ್ತು ಅವರೋಹಣಗಳ ನಡುವಿನ ಒಂದು ವ್ಯತ್ಯಾಸವನ್ನು ತಿಳಿಸಿ.

13. ರಾಗ ಎಂದರೇನು ?

14. ಸಂಗೀತವು ಗಣಿತಶಾಸ್ತ್ರದೊಂದಿಗೆ ಸಂಬಂಧ ಹೊಂದಿರಲು ಕಾರಣವಾದ ಮುಖ್ಯ ಅಂಶವೇನು ?

15. ಮಿಶ್ರಜಾತಿ ಮತ್ತು ಸಂಕೀರ್ಣ ಜಾತಿಗಳ ನಡುವಿನ ಒಂದು ವ್ಯತ್ಯಾಸವನ್ನು ಬರೆಯಿರಿ.

16. ಬಸವಣ್ಣನವರು ತನ್ನ ವಚನಗಳ ಕೊನೆಯಲ್ಲಿ 'ಕೂಡಲಸಂಗಮದೇವ' ಅಂಕಿತವನ್ನು ಬಳಸಲು ಕಾರಣವೇನು ?

**III. ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ : 7 × 2 = 14**

17. ಸಂಗೀತವು ಸಮಾಜದೊಂದಿಗೆ ನಿಕಟ ಸಂಬಂಧವನ್ನು ಹೊಂದಿರಲು ಕಾರಣವೇನು ?

18. ಈ ಕೆಳಗಿನ ಸಂಗೀತ ರಚನೆಗಳನ್ನು ಕರ್ನಾಟಕ ಹಾಗೂ ಹಿಂದೂಸ್ತಾನಿ ಸಂಗೀತ ರಚನೆಗಳಾಗಿ ವಿಂಗಡಿಸಿ ಬರೆಯಿರಿ :

ವರ್ಣ, ದ್ರುಪದ್, ತರಾನ, ಕೃತಿ, ಜಾವಳಿ, ಖ್ಯಾಲ್, ತಿಲ್ಲಾನ, ಠುಮ್ರಿ.

19. ಲಕ್ಷಣಗೀತೆಗಳು ಸಂಚಾರಿ ಗೀತೆಗಳಿಗಿಂತ ಹೇಗೆ ಭಿನ್ನವಾಗಿವೆ ? ತಿಳಿಸಿ.

20. ಜತಿಸ್ವರವನ್ನು ಆ ಹೆಸರಿನಿಂದ ಕರೆಯಲು ಕಾರಣವೇನು ?

21. ಈ ಕೆಳಗಿನ ರಾಗಗಳಲ್ಲಿ ಜನ್ಯರಾಗಗಳನ್ನು ವಿಂಗಡಿಸಿ ಬರೆಯಿರಿ :

ಮಾಯಾಮಾಳವಗೌಳ, ಹಂಸಧ್ವನಿ, ಆನಂದಭೈರವಿ, ಶಂಕರಾಭರಣ, ಕಾಂಭೋಜಿ, ಕಾಮವರ್ಧಿನಿ, ಮೋಹನ.

22. ಶ್ರೀ ಪುರಂದರದಾಸರನ್ನು 'ಕರ್ನಾಟಕ ಸಂಗೀತ ಪಿತಾಮಹ' ಎಂದು ಕರೆಯಲು ಕಾರಣವೇನು ?

23. ಮಾರ್ಗ ಮತ್ತು ದೇಶೀ ಸಂಗೀತಗಳ ನಡುವಿನ ಒಂದು ವ್ಯತ್ಯಾಸವನ್ನು ಬರೆಯಿರಿ.

**IV. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ :**

24. ಚತುರಶ್ರ ಜಾತಿ ಮಠ್ಯತಾಳದ ಅಲಂಕಾರವನ್ನು ತಾಳಲಿಪಿಯೊಂದಿಗೆ ವಿನ್ಯಾಸಗೊಳಿಸಿ ಬರೆಯಿರಿ. **4**

25. ಸಂಗೀತ ವಾದ್ಯಗಳ ವರ್ಗೀಕರಣವನ್ನು ಸಂಕ್ಷಿಪ್ತವಾಗಿ ವಿವರಿಸಿ. **6**

DO NOT WRITE ANYTHING HERE